








ವಾಹ್! ಎಂಥವರಿಗೂ ಮತ್ತೊಮ್ಮೆ ಲವ್ ಆಗಿಬಿಡುವ ರೊಮ್ಯಾಂಟಿಕ್ ಜಾಗ, ಬದುಕಿನ ಎಲ್ಲಾ ಜಂಜಡಗಳನ್ನು ಮರೆತು ಧ್ಯಾನಸ್ಥರನ್ನಾಗಿಸುತ್ತದೆ. ಈ ಅನುಭವವೇ ಕೋ ಸಮೂಯಿಯ ಟ್ರಿಪ್ ಸಾರ್ಥಕಗೊಳಿಸಿದ್ದರೂ, ಮಕ್ಕಳಿಗಾಗಿ ಇಲ್ಲಿನ ಸೈಟ್ ಸೀಯಿಂಗ್ ಟ್ರಿಪ್ ಮಾಡಲೇಬೇಕಾಯಿತು.

ವಿಮಾನದಿಂದಲೇ ಕಾಣಿಸುವ 'ಬಿಗ್ ಬುದ್ಧ' ಅಲ್ಲಿನ ಹೆಗ್ಗುರುತು ಹಾಗೂ ಅತ್ಯಂತ ಜನಪ್ರಿಯ ಆಕರ್ಷಣೆಗಳಲ್ಲಿ ಒಂದು. ಅದರ ಭಂಗಿ ಅಚಲತೆ, ಶುದ್ಧತೆ ಮತ್ತು ಜ್ಞಾನೋದಯದ ಸಂಕೇತವಾಗಿವೆ.

ದಕ್ಷಿಣ ಕರಾವಳಿಯಲ್ಲಿರುವ ಆಕರ್ಷಕ ಶಿಲಾರಚನೆಗಳಾದ 'ಹಿನ್ ತಾ' ಮತ್ತು 'ಹಿನ್ ಯಾಯ್' ದ್ವೀಪ ವಿಚಿತ್ರವಾದ ಬಂಡೆಗಳಿಂದಾಗಿ ಪ್ರಸಿದ್ಧಿ ಪಡೆದಿವೆ. ಕಲೆ ಸಾಮಾನ್ಯವಾಗಿ ಪ್ರಕೃತಿಯನ್ನು ಅನುಕರಿಸುತ್ತದೆ, ಆದರೆ ಇಲ್ಲಿ ಪ್ರಕೃತಿ ಕಲೆಯನ್ನು ಅನುಕರಿಸಿದೆ. ಅಜ್ಜ (ತಾ) ಮತ್ತು ಅಜ್ಜಿ (ಯಾಯ್) ಎಂದು ಕರೆಯಲ್ಪಡುವ ಈ ಬಂಡೆಗಳು ಕ್ರಮವಾಗಿ ಪುರುಷ ಮತ್ತು ಸ್ತ್ರೀ ಜನನಾಂಗಗಳಂತೆ ಕಾಣುತ್ತವೆ.

ಕೊಹ್ ಟಾವೊ ಎನ್ನುವುದರ ಅರ್ಥ 'ಆಮೆ ದ್ವೀಪ'. ಇದು ಸ್ಕೂಬಾ ಡೈವಿಂಗ್ ತಾಣ. ಅಗತ್ಯ ಈಜು ಉಡುಗೆಯೊಂದಿಗೆ ಸ್ಕೂಬಾ ಡೈವ್ ಮಾಡಿದಾಗ ನ್ಯಾಷನಲ್ ಜಿಯಾಗ್ರಫಿಯಲ್ಲಿ ಕಾಣುವಂಥ ದೃಶ್ಯವನ್ನು ಕಾಣಬಹುದು. ಇದಕ್ಕೆ ನಿಮಗೆ ಈಜು ಬರಲೇಬೇಕೆನ್ನುವ ಅಗತ್ಯವಿಲ್ಲ.

ಮಕ್ಕಳ ಜೊತೆಯಲ್ಲಿ ಸದ್ದುಗದ್ದಲವಿಲ್ಲದೆ ಸ್ನೋರ್ಕ್ಲಿಂಗ್ ಮಾಡುವವರಿಗೆ ಮೇನಮ್ ಬೀಚ್ ಉತ್ತಮ. ಪ್ರವಾಸಿಗರು ಕಡಿಮೆಯಿದ್ದಾಗ, ತಮ್ಮದೇ ಪ್ರಪಂಚದಲ್ಲಿ ಮುಳುಗಿರುವ ಪ್ರೇಮಿಗಳನ್ನು ಅಲ್ಲಿ ಕಾಣಬಹುದು. ಆ ಬೀಚ್‌ಗೂ ಪ್ರೇಮಿಗಳಿಗೂ ಏನೋ ಸಂಬಂಧವಿರಬೇಕು. ಬೀಚ್‌ನ ರಸ್ತೆಯ ಉದ್ದಕ್ಕೂ ನೂರಾರು ಬಣ್ಣ ಬಣ್ಣದ, ಹೊಸ–ಹಳೆಯ ತುಕ್ಕು ಹಿಡಿದ ಬೀಗಗಳು! ತಮ್ಮ ಪ್ರೇಮ ಶಾಶ್ವತವಾಗಿರಲಿ ಎಂದು ಆಶಿಸುತ್ತಾ, ಇಬ್ಬರ ಹೆಸರನ್ನು ಬರೆದಿರುವ ಬೀಗವನ್ನು ಅಲ್ಲಿನ ಕಬ್ಬಿಣದ ಸರಳಿಗೆ ಹಾಕುವ ಪ್ರೇಮಿಗಳು, ಬೀಗದ ಕೈಯನ್ನು ಸಮುದ್ರಕ್ಕೆ ಎಸೆಯುತ್ತಾರಂತೆ. ಇದರಿಂದ ಅವರ ಪ್ರೇಮ ಶಾಶ್ವತವಾಗುವುದು ಎನ್ನುವುದು ಅವರ ನಂಬಿಕೆ. ಎಂಥ ಮುಗ್ಧ ನಂಬಿಕೆ. ಛೆ! ನಾನೂ ಒಂದು ಬೀಗ ತರಬಾರದಿತ್ತೆ ಎಂದು ಕೊರಗಿದೆ.

## ವಾಟ್ ಪ್ಲೈ ಲಾಮ್

ಇದು ಹದಿನೆಂಟು ತೋಳನ್ನು ಹೊಂದಿದ, ಕರುಣೆ ಮತ್ತು ಸಹಾನುಭೂತಿಯ ಬಿಳಿ ದೇವತೆ 'ಗುವಾನಿನ್' ದೇವಾಲಯ. ವಾಟ್ ಪ್ಲೈ ಲಾಮ್ ಪ್ರವಾಸಿಗರಿಗೆ ಚೀನೀ–ಥಾಯ್ ನಂಬಿಕೆಗಳ ಜೊತೆಗೆ ಬೌದ್ಧ–ವಿಷಯದ ಕಲೆ ಮತ್ತು ವಾಸ್ತುಶಿಲ್ಪದ ವಿಸ್ತಾರವಾದ ನೋಟವನ್ನು ನೀಡುತ್ತದೆ. ಅದರ ಸೃಷ್ಟಿಯಲ್ಲಿ ಬಳಸಲಾದ ಕಲಾತಂತ್ರಗಳು ಶತಮಾನಗಳಷ್ಟು ಹಳೆಯವು.

ಫಿಷರ್ ಮ್ಯಾನ್ಸ್ ವಿಲೇಜ್–ಬೋಫುಟ್ ಬೀಚ್ ಒಂದು ಕಾಲದಲ್ಲಿ ಮೀನುಗಾರರ ನೆಲೆಯಾಗಿತ್ತು. ಈಗಲ್ಲಿ ಮೀನುಗಾರಿಕೆ ಕಸುಬು ಕುಸಿದಿದೆ, ಆದರೆ ಹಳೆಯ ಮರದ ಅಂಗಡಿ ಮುಂಗಟ್ಟುಗಳನ್ನೂ ಹಾಗೆ ಕಾಪಾಡಲಾಗಿದೆ. ಅವುಗಳಲ್ಲಿ ಹೆಚ್ಚಿನವನ್ನು ರೆಸ್ಟೋರೆಂಟ್ ಮಾಡಿದ್ದಾರೆ. ಇಂಗ್ಲಿಷ್ ಬಾರದ ಅಲ್ಲಿನವರ ವ್ಯಾಪಾರವೇ ಚಂದ. ಬೆಲೆಯನ್ನ ಕ್ಯಾಲ್ಕುಲೇಟರ್‌ನಲ್ಲಿ ತೋರಿಸುತ್ತಾರೆ. ಚೌಕಾಸಿ ಮಾಡಬೇಕೆನಿಸಿದರೆ ನೀವು ಕೊಡಬಯಸುವ ದರವನ್ನೂ ಕ್ಯಾಲ್ಕುಲೇಟರ್‌ನಲ್ಲಿ ತೋರಿಸಬೇಕು. ಆಗವರು ತಲೆ ಅಲ್ಲಾಡಿಸುತ್ತಾ 'ಕೃನ್ನಾ... ಕೃನ್ನಾ' ಎನ್ನುತ್ತಾರೆ. ಅದರ ಅರ್ಥ 'cannot' ಎಂದು. ಸಮುದ್ರದ ಉಪ ವಸ್ತುಗಳಿಂದ ತಯಾರಿಸಿದ ಬಣ್ಣ ಬಣ್ಣದ ಒಂದಿಷ್ಟು ವಸ್ತುಗಳನ್ನು ಮಕ್ಕಳಿಗಾಗಿ ಕೊಳ್ಳಬೇಕೆನ್ನಿಸದೆ ಇರದು. ಪಕ್ಕಾ ಥಾಯ್ ಅನುಭವ ನಿಮಗಾಗ ಬೇಕಾದರೆ ಒಮ್ಮೆ ಇಲ್ಲಿಗೆ ಭೇಟಿ ನೀಡಿ.

ಸ್ಪೀಡ್ ಬೋಟ್‌ನಲ್ಲಿ ಐಲ್ಯಾಂಡ್ ಹಾಪ್ಪಿಂಗ್, ಸುತ್ತಾಟ ಮುಗಿಸಿ ರೆಸಾರ್ಟ್‌ಗೆ ಬಂದರೆ ಅದೇ ಕಾಪುನ್ನಾ ಧ್ವನಿ, ಅದೇ ಥಾಯ್ ಸಂಗೀತ, ಅದೇ ಶಾಂತ ಸಮುದ್ರ, ಮತ್ತದೇ ಏಕಾಂತ. ಬಾನ ಚಂದಿರನ ಜೊತೆ ಪಿಸುಗುಡುತ್ತಾ ಕಳೆದುಹೋಗುವುದರ ಮಜವೇ ಬೇರೆ. ಥಾಯ್ಲೆಂಡ್ ಎಂದರೆ, ಬ್ಯಾಂಕಾಕ್–ಪಟ್ಟಾಯ ಎಂದು ಮಾತ್ರ ಗೊತ್ತಿರುವವರು, ಅಲ್ಲಿನ ಪ್ರವಾಸ ಎಂದರೆ ತುಂಟ ನಗೆ ಬೀರುವುದು ಸಾಮಾನ್ಯ. ಆದರೆ, ಪ್ರಸಿದ್ಧಿಯ ಹಪಹಪಿಯಿಲ್ಲದೇ ತಮ್ಮದೇ ಆದ ಆದರಾತಿಥ್ಯಕ್ಕೆ ಹೆಸರು ಮಾಡಿರುವ ಈ ಕೋಸಮೂಯಿ ಮಾತ್ರ 'ಕಪುನ್ನಾ' ಎಂದು ತಲೆದೂಗುತ್ತಲೇ ಇರುತ್ತದೆ.

■